# ನಂಬಿಕೆ ತಿಳಿವಳಿಕೆ

ಧರ್ಮವೆಂದರೆ– ಸ್ಥೂಲವಾಗಿ ಹೇಳುವುದಾದರೆ ಒಳ್ಳೆಯ ಬಾಳನ್ನು ಬಾಳುವುದು ಹೇಗೆ ಎಂಬ ತಿಳಿವಳಿಕೆಯಾಗಿದೆ. ಸ್ಥೂಲವಾಗಿ ಹೇಳುವುದಾದರೆ ಎನ್ನುವುದೇಕೆಂದರೆ ಬಾಳು ಮತ್ತು ತಿಳಿವಳಿಕೆಯ ಸ್ವರೂಪಗಳೇ ತುಂಬ ಸೂಕ್ಷ್ಮವಾಗಿವೆ ಎಂಬುದರಿಂದ. ಆದುದರಿಂದ ಧರ್ಮ ಎನ್ನುವ ಪದದ ಜೊತೆಗೆ ಸೂಕ್ಷ್ಮ ಎನ್ನುವ ಪದವನ್ನಿಟ್ಟೇ ಅನೇಕ ಸಲ ಬಳಸಲಾಗುತ್ತದೆ. ಬಿಕ್ಕಟ್ಟಿನ ಸಂದರ್ಭಗಳನ್ನು ವಿವರಿಸುವಾಗಲೆಲ್ಲ ಇಲ್ಲೊಂದು ಧರ್ಮಸೂಕ್ಷ್ಮವಿದೆ ಎನ್ನುತ್ತೇವೆ. ತಿಳಿವಳಿಕೆಯ ಸ್ವರೂಪವನ್ನೇ ನೋಡಿ. ತಿಳಿವಳಿಕೆಯು ಎಂದೆಂದೂ ತನ್ನನ್ನು ತಾನು ಮೀರಲು ಹವಣಿಸುತ್ತಲೇ ಇರುತ್ತದೆ. ತನ್ನನ್ನೇ ತಾನು ಮೀರಲು, ಮತ್ತೆ ಮತ್ತೆ ಹೊಸದಾಗಲು, ಹೊಸದಾಗುತ್ತ ವಿಸ್ಮಯಗೊಳ್ಳುವ ತನ್ನ ಸಾಮರ್ಥ್ಯವನ್ನು ಎಂದೆಂದೂ ಕಳೆದುಕೊಳ್ಳದಿರಲು ತಿಳಿವಳಿಕೆಯು ಬಯಸುತ್ತಲೇ ಇರುತ್ತದೆ. ಅಂದರೆ ತಾನು ಸ್ಥಗಿತಗೊಳ್ಳಲು ನಿರಾಕರಿಸುತ್ತದೆ. ಸ್ಥಗಿತಗೊಂಡ ಕಾಲಬಾಧಿತವಾದ ತನ್ನ ರೂಪಕ್ಕೆ ತಾನೇ ಹೇಸುತ್ತದೆ. ಕಾಲದಲ್ಲಿ, ಸಂದರ್ಭಗಳಲ್ಲಿ ಸ್ಥಗಿತಗೊಂಡ ತಿಳಿವಳಿಕೆಯು ನಿಜವಾಗಿ ತಿಳಿವಳಿಕೆಯೇ ಅಲ್ಲ ಅದು ತಿಳಿವಳಿಕೆಯ ರೂಪದಲ್ಲಿರುವ ಪೂರ್ವಗ್ರಹವೇ ಸರಿ. ಇದನ್ನು ನಾವು ಒಪ್ಪಿದರೆ, ನಿಜವಾದ ತಿಳಿವಳಿಕೆಯುಳ್ಳ ಜ್ಞಾನಿಗಳು ಅಂಥವರಿದ್ದರೆ ಅವರು ಜನರೊಡನೆ ಹೇಗೆ ಮಾತಾಡಬೇಕು; ಹೇಗೆ ಮಾತಾಡಿ ತಮ್ಮ ಆಳದ ತಿಳಿವಳಿಕೆಯನ್ನು ಸೂಚಿಸಬೇಕು; ಸೂಚಿಸಿ ಜನರನ್ನು ಹೇಗೆ ಹೆಚ್ಚು ಸೂಕ್ಷ್ಮಜ್ಞರನ್ನಾಗಿ ಮಾಡಬೇಕು ಎಂಬುದೊಂದು ದೊಡ್ಡ ಸವಾಲಾಗಿ ಕಾಣಿಸುತ್ತದೆ.

ಏಕೆಂದರೆ ಸ್ಥಗಿತಗೊಂಡ ತಿಳಿವಳಿಕೆಯೇ ಲೋಕದಲ್ಲಿ ಹೆಚ್ಚು ಪ್ರಚಲಿತವಿರುವುದು ನಂಬಿಕೆ ಎಂದರೆ ಒಂದರ್ಥದಲ್ಲಿ ಸ್ಥಗಿತಗೊಂಡ ತಿಳಿವಳಿಕೆಯೇ. ತಿಳಿವಳಿಕೆಯ ಮೇಲೆ ಕಾಳಜಿ ಇದ್ದವರು ಇದು ನಮ್ಮ ತಿಳಿವಳಿಕೆ ಎನ್ನಬೇಕು. ಇದು ನಮ್ಮ ನಂಬಿಕೆ ಎಂದಲ್ಲ. ಆದರೆ ಎಲ್ಲರೂ ಆಡುತ್ತಿರುವುದು ಇದು ನಮ್ಮ ನಂಬಿಕೆ– ಎಂಬ ನುಡಿಗಟ್ಟನ್ನೇ. ನಂಬಿಕೆ ಎಂದಾಗ ಅದೊಂದು ಭಾರವೂ ಆಗಬಹುದು. ನಾವೆಲ್ಲರೂ ಒಂದೊಂದು ಸಾಂಸ್ಕೃತಿಕ ಸಂದರ್ಭದಲ್ಲಿ ಬೆಳೆದವರಾದುದರಿಂದ ಆ ಸಂದರ್ಭದ ನಂಬಿಕೆಗಳು ನಮ್ಮ ನಂಬಿಕೆಯಾಗಿ ನಮಗೆ ತಿಳಿಯದೆಯೇ ನಮ್ಮೊಳಗೆ ಪ್ರವೇಶಿಸಿ ಬೆಳೆಯಿತಲ್ಲದೆ ಬೇರೇನೂ ಅಲ್ಲ. ಆದುದರಿಂದಲೇ ನಂಬಿಕೆಯು ಸ್ಥಗಿತಗೊಂಡ ತಿಳಿವಳಿಕೆ. ನಮ್ಮನ್ನು ನಾವು ನಂಬುವ ಜನರೆಂದುಕೊಳ್ಳಬಹುದಲ್ಲದೆ ತಿಳಿವಳಿಕೆಯುಳ್ಳ ಜನ ಎಂದುಕೊಳ್ಳುವುದು ಸಾಹಸದ ಮಾತಾದೀತು. ಕೆಲವೊಮ್ಮೆ ನಮ್ಮ ನಂಬಿಕೆಗಳ ಕಾರಣದಿಂದಲೇ ನಮ್ಮ ಮನಸ್ಸು ವ್ಯಗ್ರಗೊಂಡಾಗ, ಮನಸ್ಸು ಉಗ್ರಗೊಂಡಾಗ ನಾವು ಮತಾಂಧರೇ ಆಗಿಬಿಡುತ್ತೇವೆ. ಇಂಥ ನಮ್ಮೊಡನೆ ಜ್ಞಾನಿಗಳು ಹೇಗೆ ಮಾತಾಡುವರು ಅವರ ಮಾತಿನ ಪರಿ ಹೇಗಿರುತ್ತದೆ ಎಂದು ಒಂದು ಅನುಭವವನ್ನು ನಿವೇದಿಸುತ್ತೇನೆ.

ಅವರೊಬ್ಬರಿದ್ದರು. ನೋಡುವುದಕ್ಕೆ ಎಲ್ಲರಂತಿದ್ದರು. ಸಾಮಾನ್ಯರಲ್ಲಿ ಸಾಮಾನ್ಯರಂತಿದ್ದರು. ಆದರೆ ನಿಜಕ್ಕೂ ಎಲ್ಲರಂತಿರಲಿಲ್ಲ. ತಮ್ಮ ಕುರಿತು ತಾವು ಹೇಳಿಕೊಳ್ಳಬೇಕಾದಾಗಲೆಲ್ಲ ನಾವು ಬಂದವರು ಎಂದೇ ಹೇಳುತ್ತಿದ್ದರು. ಅವರ ಈ ನಾವು ಬಂದವರು ಎನ್ನುವ ಹೇಳಿಕೆ ಸುತ್ತಲಿನ ಎಲ್ಲರಲ್ಲಿ ಕಸಿವಿಸಿ ಉಂಟು ಮಾಡುತ್ತಿತ್ತು. ಏಕೆ ಹೀಗೆ ಹೇಳುವಿರಿ? ನಮ್ಮೆಲ್ಲರಿಂದ ಭಿನ್ನವಾಗಿ ಕಾಣಿಸುವ ಈ ಮಾತೇಕೆ? ಏನಿದರರ್ಥ? ಎಂದು ಒಮ್ಮೆ ಆಪ್ತವಾಗಿ ಕೇಳಿದೆ. ಅವರು ಹೇಳಿದ್ದಿದು: ನಿಮ್ಮೆಲ್ಲರನ್ನು ನೋಡಿದಾಗ ನಿಮ್ಮ ಮನದಾಳದಲ್ಲಿರುವ ನಂಬಿಕೆಯೊಂದು ನಮಗೆ ಕಾಣಿಸಿತು. ಅದೇನೆಂದರೆ– ನಿಮ್ಮೆಲ್ಲರಲ್ಲಿ ಗಟ್ಟಿಯಾಗಿರುವ ಧೋರಣೆ– ನೀವು (ಇಲ್ಲಿ) ಇರುವವರೆಂದು! ನೀವು ಇಲ್ಲಿ ಈ ಲೋಕದಲ್ಲಿ ಇರುವವರು! (ಆದುದರಿಂದ) ಈ ಲೋಕ ನಿಮ್ಮದು. ನಿಮ್ಮದೇ ಆಗಿರುವ ಈ ಲೋಕವನ್ನು ಎಷ್ಟು ಹೆಚ್ಚು ನಿಮ್ಮದಾಗಿಸಿಕೊಳ್ಳಲು ಸಾಧ್ಯವೋ ಅಷ್ಟೆಲ್ಲ ಪ್ರಯತ್ನಗಳನ್ನು ಎಲ್ಲರೂ ಮಾಡುತ್ತಲೇ ಇದ್ದೀರಿ. ನಾವು ನೋಡುತ್ತಲೇ ಇದ್ದೇವೆ. ಆಗಲಿ, ಇದು ನಿಮ್ಮದೇ ಲೋಕವೆಂದೇ ಆಗಲಿ, ನಿಮ್ಮದೇ ಲೋಕವನ್ನು ಚೆನ್ನಾಗಿ ಇಟ್ಟುಕೊಳ್ಳಬೇಕಾದುದು ನಿಮ್ಮ ಕರ್ತವ್ಯವೆಂದು ಇಷ್ಟು ಸರಳ ಸತ್ಯ– ನಿಮಗೇಕೆ ತಿಳಿಯುತ್ತಿಲ್ಲ. ಏಕೆ ಮೇಧಾವಿಗಳೆಲ್ಲ ಸೇರಿ ಎರಡು ಮಹಾಯುದ್ಧಗಳನ್ನು ನಡೆಸಿದಿರಿ? ಇನ್ನೊಂದು ಯುದ್ಧಕ್ಕೆ ಏಕೆ ಮುನ್ನುಡಿ ಬರೆಯುತ್ತಲಿದ್ದೀರಿ? ದಿನ ನಿತ್ಯ ಎಂಥ ಹಿಂಸಾಕಾಂಡವನ್ನು ನಡೆಸುತ್ತಲಿದ್ದೀರಿ? ನಿಮ್ಮದೇ ಲೋಕವೆನ್ನುವ ಧೋರಣೆಯ ಅರ್ಥ ಈ ಲೋಕವನ್ನು ನೀವು ಹಾಳುಗೆಡವಬಹುದು; ಈ ಸುಂದರ ತೋಟವನ್ನು ಸುಡುಗಾಡಾಗಿ ಮಾಡಬಹುದು ಎಂದಾಗುತ್ತದೆಯೆ? ಇದೆಲ್ಲವೂ ನಿಮ್ಮ ಕಣ್ಣ ಮುಂದೆಯೇ ನಡೆಯುತ್ತಿದ್ದರೂ ಎಲ್ಲೋ ಏನೋ ತಪ್ಪಾಗಿಬಿಟ್ಟಿದೆ ಎಂದು ನಿಮಗೇ ಹೊಳೆದರೂ, ಆ ತಪ್ಪು ಇತರರು ಮಾಡಿದ್ದಾಗಿ ಕಾಣಿಸುತ್ತದೆ ವಿನಾ ನಿಮ್ಮ ಧೋರಣೆಯಲ್ಲೇ ತಪ್ಪಿರಬಹುದು ಎಂದು ನಿಮಗೆ ಅನಿಸುವುದೇ ಇಲ್ಲವಲ್ಲ! ಹೋಗಲಿ ಬಿಡಿ! ನೀವು ಇರುವವರು! ಆದರೆ ವ್ಯಕ್ತಿಯೋರ್ವ ಸತ್ತಾಗ ಅವನು ಹೋದ ಎಂದೇಕೆ ಹೇಳುವಿರಿ? ಬಂದವನು ತಾನೇ ಹೋಗೋದು? ಇರುವವನು ಹೋಗಬೇಕೇಕೆ? ಹೋಗುವವನು ಎಲ್ಲಿಂದ ಬಂದನೋ ಅಲ್ಲಿಗೆ ತಾನೇ ಹೋಗೋದು! ಅಲ್ಲದೆ, ನಿಜಕ್ಕೂ ಇರುವವನಿಗೆ ಯಾರು ಹೋದರೂ ಅವನು ಹೋದ ಎಂಬ ಮಾತು ಚಿಂತೆಗೆ ಕಾರಣವಾಗಬೇಕು! ನಿಮಗದು ಆದಂತೆ ಕಾಣುವುದಿಲ್ಲ. ಆಪ್ತೇಷ್ಟರು ಹೋದಾಗ ಕ್ಷಣ ಕಾಲ ಚಿಂತೆಯಾಗಬಹುದು. ಅಷ್ಟೇ!

ತೀವ್ರವಾಗಿ ಯೋಚಿಸಿ ನೋಡಿ.

ನಾವು ಬಂದವರು7 ಎಂದು ನಮಗೆ ಹೇಳಬೇಕೆಂದಿರಲಿಲ್ಲ. ಆದರೆ ನಾವು ಇರುವವರು ಎನ್ನುವ ನಿಮ್ಮ ನಂಬಿಕೆ ಅದಕ್ಕಿಂತ ಭಿನ್ನವಾದ ಮಾತನ್ನು ನಮ್ಮಲ್ಲಿ ಸೃಷ್ಟಿಸಿತು.

ನಿಜವಾದ ತಿಳಿವಳಿಕೆಯು ಸ್ಥಗಿತಗೊಂಡ ನಂಬಿಕೆಯೊಂದನ್ನು ಎಂದೆಂದೂ ಸಮರ್ಥಿಸಲಾರದು. ಆದರೆ ನಂಬಿಕೆಯನ್ನು ಖಂಡಿಸುವಾಗ, ಅದರ ತಪ್ಪು ಅದಕ್ಕೇ ತಿಳಿಯುವಂತೆ ತನ್ನ ಭಿನ್ನ ನುಡಿಕಟ್ಟುಗಳನ್ನು ಬಳಸುತ್ತದೆ. ಸಮರ್ಥನೆಯ ಮಾತು ಪೆಡಸು. ಗೂಟ ಹೊಡೆದಂತೆ ಇರುತ್ತದೆ. ತಿಳಿವಳಿಕೆಯ ಮಾತು ಬೆಳಕು ಚೆಲ್ಲಿ ಮಿಂಚಿ ಮರೆಯಾಗುತ್ತದೆ.

■ **ತೋಷ**

## ಮಾತೇ ಮುತ್ತು

★ ಜೀವನದಲ್ಲಿ ಇರುವುದೇ ಒಂದು ಸಂತೋಷದ ಸಂಗತಿ. ಅದೆಂದರೆ ಪ್ರೀತಿಸಲ್ಪಡುವುದು ಮತ್ತು ಪ್ರೀತಿಸುವುದು.

–ಜಾರ್ಜ್ ಸ್ಯಾಂಡ್

★ ಬದಲಾವಣೆ ಬದುಕಿನ ನಿಯಮ. ಭೂತಕಾಲ ಮತ್ತು ವರ್ತಮಾನವನ್ನು ಮಾತ್ರ ನೋಡುವವರು ಭವಿಷ್ಯವನ್ನು ಕಳೆದುಕೊಳ್ಳುತ್ತಾರೆ.

–ಜಾನ್ ಎಫ್ ಕೆನೆಡಿ

★ ಮನುಷ್ಯರನ್ನು ಒಟ್ಟುಗೂಡಿಸುವುದು ಎರಡೇ– ಭಯ ಮತ್ತು ಆಸಕ್ತಿ.

–ನೆಪೋಲಿಯನ್ ಬೊನಪಾರ್ಟ್

★ ಕ್ರೀಡೆಯಲ್ಲಿ ಕೆಲವೊಮ್ಮೆ ನೀವು ಅಪಾಯಗಳನ್ನು ಆಹ್ವಾನಿಸಲೇಬೇಕು. ಆದರೆ ವಾಸ್ತವದ ಅಪಾಯಗಳನ್ನುಎದುರಿಸಿ, ಹುಚ್ಚು ಅಪಾಯಗಳನ್ನಲ್ಲ.

–ಸರ್ಗಿ ಬುಬ್ಕಾ

★ ಸಹಾಯ ಮಾಡುವ ಹೃದಯ ಇದ್ದವನಿಗೆ ಟೀಕಿಸುವ ಅಧಿಕಾರವೂ ಇರುತ್ತದೆ.

–ಅಬ್ರಹಾಂ ಲಿಂಕನ್

★ ನೀವು ಏನನ್ನು ಬೇಕಾದರೂ ಮಾಡಬಹುದು, ಆದರೆ ಎಲ್ಲವನ್ನೂ ಮಾಡಲು ಆಗುವುದಿಲ್ಲ.

–ಡೇವಿಡ್ ಆಲನ್

★ ಜಗತ್ತು ಅಪಾಯಕಾರಿ. ದುಷ್ಟರಿಂದಾಗಿ ಅಲ್ಲ; ದುಷ್ಟತನವನ್ನು ನೋಡಿ ಸುಮ್ಮನಿರುವ ಒಳ್ಳೆಯವರಿಂದಾಗಿ.

–ಆಲ್ಬರ್ಟ್ ಐನ್‌ಸ್ಟೀನ್

★ ನಿಷ್ಪ್ರಯೋಜಕ ವ್ಯಕ್ತಿಗಳು ಕೇವಲ ತಿನ್ನುವುದಕ್ಕಾಗಿ ಮತ್ತು ಕುಡಿಯುವುದಕ್ಕಾಗಿ ಬದುಕುತ್ತಾರೆ. ಪ್ರಯೋಜನಕಾರಿ ವ್ಯಕ್ತಿಗಳು ಬದುಕುವುದಕ್ಕಾಗಿ ತಿನ್ನುತ್ತಾರೆ ಮತ್ತು ಕುಡಿಯುತ್ತಾರೆ.

–ಸಾಕ್ರೆಟಿಸ್

★ ಕೇವಲ ಸುತ್ತಿಗೆ ಇದ್ದವನಿಗೆ ಎದುರಿಗೆ ಇರುವುದೆಲ್ಲವೂ ಮೊಳೆಯಂತೆಯೇ ಕಾಣಿಸುತ್ತದೆ.

–ಅಬ್ರಹಾಂ ಮಾಸ್ಲೊ